

# ಎಂ.ಎಸ್.ಕೆ. ಪ್ರಭು

**(1938 – 2000)**

ಕತೆಗಾರ ಎಂ.ಎಸ್.ಕೆ. ಪ್ರಭು (ಮಂದಗೆರೆ ಸೀತಾರಾಮಯ್ಯ ಕೇಶವ ಪ್ರಭು) ಕನ್ನಡದ ಮಹತ್ವದ ಮತ್ತು ಅಪರೂಪದ ಕತೆಗಾರ, ನಾಟಕಕಾರ. ಅವರು ಬರೆದ್ದು ಫ್ಯಾಂಟಸಿ (ಅದ್ಭುತರಮ್ಯ) ಕತೆಗಳನ್ನು ಮಾತ್ರ. ಅವರ ಕತೆಗಳು ಆಧುನಿಕ ಮನುಷ್ಯನ ಅವಸ್ಥೆಯನ್ನು, ಪರಿಶೀಲಿಸುತ್ತವೆ; ನಾವು ಕಾಣುವ ವಾಸ್ತವ ಲೋಕವನ್ನು ತಲೆಕೆಳಗಾಗಿ ಇಲ್ಲವೇ ಇನ್ನೊಂದು ಮಗ್ಗಲಿನಿಂದ ನೋಡುತ್ತವೆ. ಪ್ರಭು ಬರೆದದ್ದು ತೀರ ಕಡಿಮೆ. 'ಬೆತ್ತಲೆ ಅರಸನ ರಾಜ ರಹಸ್ಯ', 'ಮುಖಾಬಿಲೆ', 'ಗರ' ಅವರ ಪ್ರಕಟಿತ ಕಥಾ ಸಂಗ್ರಹಗಳು. ಈ ಮೂರು ಸಂಗ್ರಹಗಳ ಕತೆಗಳ ಸಂಖ್ಯೆ 18. ಇಷ್ಟು ಕಡಿಮೆ ಬರೆದೂ ಮುಖ್ಯವಾದ ಕತೆಗಳನ್ನು ಬರೆದವರು ಕನ್ನಡದಲ್ಲಿ ವಿರಳ.

'ವಿದೇಶಿ ಕತೆಗಳು', 'ಕಾಣೆಯಾದ ಟೋಪಿ ಮತ್ತು ಇತರ ಕತೆಗಳು' ಅವರ ಅನುವಾದಿತ ಕಥಾಸಂಕಲನಗಳು. ಅವರು ಕನ್ನಡದ ಉತ್ತಮ ನಾಟಕಕಾರರು. 'ಬಕ', 'ಮಹಾಪ್ರಸ್ಥಾನ', 'ಸಿಸೆರೊ', 'ಗುಲಾಮನ ಸ್ವಾತಂತ್ರ್ಯಯಾತ್ರೆ', 'ಒಳ್ಳೆಯ ಸಮಯ ಮತ್ತು ಇತರ ನಾಟಕಗಳು' ಅವರ ನಾಟಕಗಳ ಪುಸ್ತಕಗಳಾಗಿವೆ. ಮಕ್ಕಳಿಗಾಗಿ ಬರೆದ ಕೃತಿ 'ಪೋಕರಿ ಪಾಪಣ್ಣನ ಪರಾಕು' ಪ್ರಭು ಅವರ ಮರಣದ ಬಳಿಕ ಪುಸ್ತಕವಾಗಿ ಪ್ರಕಟಗೊಂಡಿತು. ಇದು ಇಟಲಿಯ ಕಾರ್ಲೋ ಕೊಲೋಡಿಯನ 'ಪಿನೋಕಿಯೊ'ವನ್ನು ಆಧರಿಸಿ ಬರೆದ ಕಾದಂಬರಿ. ಪ್ರಭು ಕನ್ನಡದ ಪತ್ತೆದಾರಿ ಕತೆಗಳನ್ನು ಸಂಪಾದಿಸಿ 'ಶೋಧ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. 'ವಿರೋಧ ವಿಲಾಸ' ಅವರ ನಗೆಬರಹಗಳ ಸಂಕಲನ.

ಪ್ರಭು ಹುಟ್ಟಿದ್ದು ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆ ತಾಲ್ಲೂಕಿನ ಮಂದಗೆರೆ ಎಂಬ ಗ್ರಾಮದಲ್ಲಿ. ಅವರ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಮಂದಗೆರೆ ಹಾಗೂ ಹೊಳೆನರಸೀಪುರಗಳಲ್ಲಿ ಆಯಿತು. ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು. ಬೆಂಗಳೂರಿನ ಅಕೌಂಟೆಂಟ್ ಜನರಲ್ ಕಚೇರಿಯಲ್ಲಿ ವೃತ್ತಿಯನ್ನು ಆರಂಭಿಸಿದ ಅವರು ಬಳಿಕ ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕರಾದರು. ಪ್ರಭು ಅವರು ಈಗ ಇದ್ದಿದ್ದರೆ ಇದೇ ಜುಲೈ 15ಕ್ಕೆ 80 ವರ್ಷಗಳಾಗುತ್ತಿದ್ದವು. ಅವರ ಸಮಗ್ರ ಕತೆಗಳ ಸಂಗ್ರಹವನ್ನು ಸಾಹಿತ್ಯ ಭಂಡಾರದವರು ಪ್ರಕಟಿಸಿದ್ದಾರೆ.

**ಎಂದು ಗಡಿಬಿಡಿಯಿಂದ ಚಿಂತಿಸಿ ಹತ್ತಿರವಿದ್ದ ಕೊಳದ ಬಳಿ ಬಂದು ನಿಂತಿತು. ಕೊಳದ ತಿಳಿನೀರಿನಲ್ಲಿ ಬಿದ್ದ ಪ್ರತಿಬಿಂಬವನ್ನು ನೋಡಿ ಬೆಚ್ಚಿಬಿದ್ದಿತು. ತಲೆ, ಎರಡು ಕೈ, ಎರಡು ಕಾಲು, ಭುಜ, ಕತ್ತು, ಎದೆ, ಹೊಟ್ಟೆ, ಸೊಂಟ– ನೆಟ್ಟಗೆ ನಿಂತ ಐದೂವರೆ ಅಡಿಯ ದೇಹ. ಕಣ್ಣು, ಮೂಗು, ಬಾಯಿ, ಕಿವಿ– ಓಹೋ! ನಾನು ಮನುಷ್ಯ! ಚಿಟ್ಟೆಯಲ್ಲ, ನಾಯಿಯಲ್ಲ, ಮನುಷ್ಯ! ನೂರು ವರ್ಷ ಬಾಳಿ ಬದುಕಬಲ್ಲ, ಪ್ರಕೃತಿಯ ಅತ್ಯದ್ಭುತ ಸೃಷ್ಟಿ! ಎಂದು ಕೊಂಡು ನೀರು ಕುಡಿಯಲು ಬಗ್ಗಿದಾಗ ಕೊಳದ ತಳದಲ್ಲಿ, ಮಂದಗತಿಯಲ್ಲಿ ಚಲಿಸುತ್ತಿದ್ದ ಆಮೆಯೊಂದು ಕಣ್ಣಿಗೆ ಬಿತ್ತು. ಎಲಾ! ನಾನೆಂಥ ಮೂರ್ಖ! ಮನುಷ್ಯ ನೂರು ವರ್ಷ ಬದುಕಿದರೆ, ಆಮೆ 500**